**ಸಿ.ಸಿ. ಸಂಖ್ಯೆ 6758 / 2024**
**ಪಿ.ಡಬ್ಲೂ -01**

**ದಿನಾಂಕಃ 22.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ- ಶ್ರೀ ಜಿ ಎನ್ ಎಸ್, ಆರೋಪಿ ಪರ ವಕೀಲರಿಂದ .**

ಎಲ್ಲಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿ ಬಿಬಿಎಂ ಎಂದು ನುಡಿಯುತ್ತಾರೆ. ನಿಮ್ಮ ಖಾಯಂ ವಿಳಾಸ ಯೂವುದು ಎಂದರೆ ಸಾಕ್ಷಿ ನನ್ನ ಯಜಮಾನರ ವಿಳಾಸ ವಿಭೂತಿ ಕೆರೆ , ರಾಮನಗರ ತಾಲ್ಲೂಕು , ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ನುಡಿಯುತ್ತಾರೆ. ನೀವು ಯಾವುದಾದರೂ ಉದ್ಯೋಗದಲ್ಲಿ ಇದ್ದೀರಾ ಎಂದರೆ ಸಾಕ್ಷಿಯು ಇಲ್ಲ ಗೃಹಿಣಿ ಎಂದು ನುಡಿಯುತ್ತಾರೆ. ಆರೋಪಿಯು ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿಯು ನಮ್ಮ ಯಜಮಾನರು ತಿಪಟೂರು ನ್ಯಾಯಾಲಯದಲ್ಲಿ ಪ್ರೋಸೆಸ್ ಸರ್ವರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು, ಆರೋಪಿಯೂ ಅದೇ ನ್ಯಾಯಾಲಯದಲ್ಲಿ ಪ್ರೋಸೆಸ್ ಸರ್ವರ್ ಎಂದು ಕರ್ತವ್ಯ ನಿರ್ವಹಿಸುತ್ತಿದ್ದರು ಆಗ ಪರಿಚಯ ಎಂದು ನುಡಿಯುತ್ತಾರೆ. ಆರೋಪಿಯು ನಿಮಗೆ ನೇರವಾಗಿ ಪರಿಚಯ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಯಜಮಾನರು ಮತ್ತು ಆರೋಪಿಯು ತಿಪಟೂರು ನ್ಯಾಯಾಲಯದಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಯಜಮಾನರು ತಿಪಟೂರು ನ್ಯಾಯಾಲಯದಲ್ಲಿ ಎಷ್ಟು ವರ್ಷಗಳ ಕಾಲ ಕೆಲಸ ಮಾಡಿರುತ್ತಾರೆ ಎಂದರೆ ಸಾಕ್ಷಿ 2020 ರಿಂದ 2023 ರ ವರೆಗೆ ಎಂದು ನುಡಿಯುತ್ತಾರೆ. 2023 ರಿಂದ ಇಲ್ಲಿಯವರೆಗೂ ನಿಮಗೂ ಮತ್ತು ಆರೋಪಿಯ ನಡುವೆ ಯಾವುದೇ ಸಂಪರ್ಕ ಇರುವುದಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

2017 ರಲ್ಲಿ ನಿಮ್ಮ ಯಜಮಾನರು ತಿಪಟೂರು ನ್ಯಾಯಾಲಯದಲ್ಲಿ ಪ್ಯೂನ್ ಆಗಿ ಕರ್ತವ್ಯಕ್ಕೆ ನೇಮಕಗೊಂಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮ್ಮ ಯಜಮಾನರು departmental enquiry ಆಗಿ ಕರ್ತವ್ಯದಿಂದ suspend ಆಗಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. 2024

ಫೆಬ್ರುವರಿಯಲ್ಲಿ ಆರೋಪಿಗೆ ಹಣ ಕೊಟ್ಟಿರುತ್ತೇನೆ ಎಂದು ಹೇಳಿದ್ದು ಆ ಸಂಬಂಧ ಏನಾದರೂ ದಾಖಲೆ ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಆರೋಪಿಯು ಮನೆಗೆ ಬಂದು ಹಣವನ್ನು ಪಡೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಮನೆಯಲ್ಲಿ ಹಣವನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ತಿಪಟೂರಿನ ಬಾಡಿಗೆ ಮನೆಯಲ್ಲಿ ಎಂದು ನುಡಿಯುತ್ತಾರೆ.

ನಿಮ್ಮ ಯಜಮಾನರು ಕುಣಿಗಲ್ ನ್ಯಾಯಾಲಯದಲ್ಲಿ ಎಷ್ಟು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ 2 ವರ್ಷಗಳಿಂದ ಎಂದು ನುಡಿಯುತ್ತಾರೆ. 2 ವರ್ಷಗಳಿಂದ ಅಂದರೆ 2024 ರಿಂದ ನೀವು ಮಾಗಡಿಯಲ್ಲಿ ವಾಸ ಇದ್ದೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮಗೆ ಬ್ಯಾಂಕಿನ ವ್ಯವಹಾರಗಳು ಗೊತ್ತಿದೆಯೆ ಎಂದರೆ ಸಾಕ್ಷಿ ಗೊತ್ತು ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಬ್ಯಾಂಕ್ ನಲ್ಲಿ ಖಾತೆ ಹೊಂದಿ ಬ್ಯಾಂಕ್ ವ್ಯವಹಾರ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಸುಮಾರು 15 ವರ್ಷಗಳಿಂದ ಎಂದು ನುಡಿಯುತ್ತಾರೆ. ರೂ.4,50,000/- ನಿಮಗೆ ಹೇಗೆ ಬಂದಿತ್ತು ಎಂದರೆ ಸಾಕ್ಷಿ ನನ್ನ ಅತ್ತೆಯ ಬಂಗಾರವನ್ನು ಮಾರಾಟ ಮಾಡಿದ್ದು ಹಾಗೂ ನನ್ನ ತಂದೆಯ ನಿವೃತ್ತಿ ವೇತನ ಹಣವನ್ನು ನನಗೆ ಕೊಟ್ಟಿದ್ದರು ಮತ್ತು ಬಾಡಿಗೆ ಹಣ ಬರುತ್ತಿದ್ದು ಅದರಿಂದ ಸದರಿ ರೂ. 4,50,000/- ಹಣ ಇತ್ತು ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಯಾವಾಗ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸಾಕ್ಷಿ ದಿನಾಂಕ 30.06.2022 ಎಂದು ನುಡಿಯುತ್ತಾರೆ. ನಿಮ್ಮ ತಂದಯವರು ಯಾವ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಪೋಲಿಸ್ ಇಲಾಖೆಯಲ್ಲಿ ಎಫ್ ಡಿ ಎ ಕೆಲಸ ಮಾಡುತ್ತಿದ್ದರು ಆಗ ನಿವೃತ್ತಿ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ.

ನಿಮ್ಮ ವಿವಾಹವು ಯಾವಾಗ ಆಗಿರುತ್ತದೆ ಎಂದರೆ ಸಾಕ್ಷಿಯು ದಿನಾಂಕ 04.09.2022 ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ನಿಮಗೆ ಎಷ್ಟು ಹಣ ಕೊಟ್ಟಿದ್ದರು ಎಂದರೆ ಸಾಕ್ಷಿ ರೂ.3,50,000/- ಎಂದು ನುಡಿಯುತ್ತಾರೆ. ಸದರಿ ಹಣವನ್ನು ಯಾವಾಗ ಕೊಟ್ಟಿದ್ದರು ಎಂದರೆ ಸಾಕ್ಷಿ ಮದುವೆ ಸಮಯದಲ್ಲಿ ಎಂದು ನುಡಿಯುತ್ತಾರೆ. ಸದರಿ ನಿಮ್ಮ ತಂದೆಯವರು ಹಣ ಕೊಟ್ಟಿದ್ದ ಬಗ್ಗೆ ಪಿರ್ಯಾದಿಯಲ್ಲಿ ಮತ್ತು ನೋಟಿಸ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ

ಹೌದು ಎಂದು ನುಡಿಯುತ್ತಾರೆ. ಆರೋಪಿಯು ನಿಮ್ಮ ಮನೆಯಲ್ಲಿ ಬಂದು ಹಣ ಪಡೆದಿರುತ್ತಾರೆ ಎಂದು ನೋಟಿಸ್ ಮತ್ತು ಪಿರ್ಯಾದಿಯಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಮಗೆ ನೇರ ಸಂಪರ್ಕ ಇರದೇ ಇದ್ದರೂ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನೀವು ಆದಾಯ ತೆರಿಗೆ ಪಾವತಿ ಮಾಡುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ಮಾಸಿಕ ಆದಾಯ ಎಷ್ಟು ಬರುತ್ತದೆ ಎಂದರೆ ಸಾಕ್ಷಿ ನಾನು ಗೃಹಿಣಿ ಇದ್ದು ಮಾಸಿಕ ಆದಾಯ ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಚೆಕ್ ನ ಸಂಬಂಧ ನಿಮ್ಮ ಮತ್ತು ಆರೋಪಿಯ ನಡುವೆ ಯಾವುದೇ ನೇರವಾಗಿ ವ್ಯವಹಾರ ಆಗಿರುವುದಿಲ್ಲ ನಿಮ್ಮ ಯಜಮಾನರು ಮತ್ತು ಆರೋಪಿಯ ನಡುವೆ ವ್ಯವಹಾರವಾಗಿರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮೊಬೈಲ್ ನಂಬರ್ 9902540215 ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಯ ಮೊಬೈಲ್ ನಂ.6362416763 ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ದಿನಾಂಕ 03.02.2023 ರಂದು ನೀವು ರೂ.47,200/- ಹಣವನ್ನು ಫೋನ್ ಪೇ ಮುಖಾಂತರ ಆರೋಪಿಯ ಖಾತೆಗೆ ಹಾಕಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವ ಉದ್ದೇಶಕ್ಕಾಗಿ ಸದರಿ ಹಣವನ್ನು ಹಾಕಿರುತ್ತೀರಿ ಎಂದರೆ ಸಾಕ್ಷಿಯು ಆರೋಪಿಯು ಮನೆಯನ್ನು ಕಟ್ಟುತ್ತಿದ್ದು ಸಿಮೆಂಟ್ ಗಾಗಿ ಅರ್ಜೆಂಟ್ ಬೇಕಾಗಿದೆ ಎಂದು ಕೇಳಿದ್ದರಿಂದ ನನ್ನ ಖಾತೆಯಲ್ಲಿ ಅಷ್ಟು ಹಣ ಇದ್ದಿದ್ದರಿಂದ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಮಧ್ಯಹ್ನ 3.00 ಗಂಟೆಗೆ ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**

**ಸಿ.ಸಿ. ಸಂಖ್ಯೆ 6758 / 2024**
**ಪಿ.ಡಬ್ಲೂ -01**

**ದಿನಾಂಕಃ 22.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ವಾಟೀ ಸವಾಲು ಃ- ಶ್ರೀ ಜಿ ಎನ್ ಎಸ್, ಆರೋಪಿ ಪರ ವಕೀಲರಿಂದ .**

ಆರೋಪಿಯು ಯಾವ ವರ್ಷಕ್ಕೆ ಮನೆಯನ್ನು ಕಟ್ಟುವುದನ್ನು ಮುಗಿಸಿದ್ದರು ಹಾಗಾ ಯಾವಾಗ ಗೃಹಪ್ರವೇಶ ಮಾಡಿದ್ದರು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಯ ನಡುವಿನ ವ್ಯವಹಾರವು 2023 ರಲ್ಲಿ ನಡೆದಿರುತ್ತದೆಯೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ರೂ.47,200/- ಅನ್ನು ಆರೋಪಿಗೆ ನಿಮ್ಮ ಯಜಮಾನರು ಶೇ.4 ವಾರದ ಬಡ್ಡಿಯಂತೆ ಆರೋಪಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ದಿನಾಂಕ 19.10.2023 ರಂದು ಆರೋಪಿಯ ಖಾತೆಯಿಂದ ನಿಮ್ಮ ಖಾತೆಗೆ ರೂ.50,000/- ಹಣ ಪೋನ್ ಪೇ ಮುಖಾಂತರ ಜಮಾ ಆಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 03.02.2023 ರಿಂದ 19.10.2023ರ ವರೆಗೆ ಮಾತ್ರ ನಿಮ್ಮ ಮತ್ತು ಆರೋಪಿಯ ನಡುವೆ ಹಣಕಾಸಿನ ವ್ಯವಹಾರ ಇತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 8904102340 ನಂಬರ್ ಆರೋಪಿಯ ಹೆಂಡತಿ ಗಾಯತ್ರಿ ಯವರ ಪೋನ್ ನಂಬರ್ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 9008362707 ನಿಮ್ಮ ಯಜಮಾನರ ಮೊಬೈಲ್ ನಂಬರ್ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 03.02.2023 ರಂದು ನೀವು ಆರೋಪಿಗೆ ರೂ.50,000/- ಹಣವನ್ನು ಶೇ.4ರ ಬಡ್ಡಿಯಂತೆ ನೀಡಿದ್ದು ಆ ಸಂಬಂಧ ಆರೋಪಿಯ ಹೆಂಡತಿಯು ವಾರದ ಬಡ್ಡಿಯನ್ನು ನಿಮ್ಮ ಯಜಮಾನರಿಗೆ ನೀಡುತ್ತಾ ಬಂದಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ದಿನಾಂಕ 27.02.2023 ರಂದು ರೂ. 20,000/-, ದಿನಾಂಕ 01.03.2023 ರಂದು ರೂ.4,000/-, ದಿನಾಂಕ 27.03.2023 ರಂದು

ರೂ.13,000/-, ದಿನಾಂಕ 23.05.2023 ರಂದು ರೂ.7,000/-, ದಿನಾಂಕ 31.06.2023 ರಂದು ರೂ.20,000/- ಹಾಗೂ ದಿನಾಂಕ 21.09.2023 ರಂದು ರೂ. 15,000/- ಹೀಗೆ ಒಟ್ಟು ರೂ. 73,000/- ಹಣ ಆರೋಪಿಯ ಹೆಂಡತಿಯಾದ ಗಾಯತ್ರಿಯವರ ಖಾತೆಯಿಂದ ನಿಮ್ಮ ಯಜಮಾನರ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿ ನಡುವೆ ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ರೂ.50,000/- ಹಣಕ್ಕೆ ಕೊಟ್ಟಿದ್ದ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ನಿಮ್ಮ ಯಜಮಾನರು ನಿಮ್ಮಿಂದ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮ್ಮ ಯಜಮಾನರು ಮತ್ತು ಆರೋಪಿಯು ನ್ಯಾಯಾಂಗ ಇಲಾಖೆಯಲ್ಲಿ ನೌಕರರಾಗಿದ್ದು ನಿಮ್ಮ ಯಜಮಾನರು ದೂರನ್ನು ಸಲ್ಲಿಸಲಾಗದ ಕಾರಣ ಸುಳ್ಳು ಕಥೆಗಳನ್ನು ಸೃಷ್ಟಿಸಿ ನಿಮ್ಮಿಂದ ಸುಳ್ಳು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಯಾವ ದಿನಾಂಕದಂದು ಆರೋಪಿಯು ಹಣ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕ ನೆನಪಿರುವುದಿಲ್ಲ ಆದರೆ ಫೆಬ್ರುವರಿಯಲ್ಲಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಬಾಡಿಗೆ ಹಣ ಬರುತ್ತಿದೆ ಎಂದು ಹೇಳಿದ್ದು ಆ ಸಂಬಂಧ ದಾಖಲೆಯನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 2024 ರಲ್ಲಿ ಹಣ ಪಡೆದು ಒಂದು ವರ್ಷ ವಾಯ್ದೆ ಎಂದು ಹೇಳಿದ್ದು ಅಂದರೆ 2025ರ ವರೆಗೆ ವಾಯ್ದೆ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 2024-2025 ರಲ್ಲಿ ನಿಮ್ಮ ಮತ್ತು ಆರೋಪಿಗಳ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ , ನಿಮ್ಮ ಯಜಮಾನರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 2022 ರಿಂದ ಇಲ್ಲಿಯವರೆಗೂ ನಿಮ್ಮ ಯಜಮಾನರು ಕುಣಿಗಲ್ ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸಾಕ್ಷಿ

ಮುಂದುವರೆದು 2022 ರಿಂದ ಅಲ್ಲ 2024 ರಿಂದ ಕುಣಿಗಲ್ ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಿಮ್ಮ ಯಜಮಾನರು 2019-2020 ರ ಸಾಲಿನಲ್ಲಿ departmental enquiry ಆಗಿ ಕರ್ತವ್ಯದಿಂದ suspend ಆಗಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮ್ಮ ಯಜಮಾನರು departmental enquiry ಆಗಿ ಕರ್ತವ್ಯದಿಂದ suspend ಆಗಿದ್ದರು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮಾಗಡಿಯಲ್ಲಿ ಎಷ್ಟು ವರ್ಷಗಳಿಂದ ಬ್ಯಾಂಕ್ ಖಾತೆಯನ್ನು ಹೊಂದಿರುತ್ತೀರಿ ಎಂದರೆ ಸಾಕ್ಷಿ 3 ವರ್ಷಗಳಿಂದ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಯ ನಡುವೆ ನೇರವಾಗಿ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ಯಾವಾಗ ಚೆಕ್ ಅನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಫೆಬ್ರುವರಿ 2024 ರಲ್ಲಿ ನಾನು ಹಣವನ್ನು ಕೊಟ್ಟ ದಿನವೆ ಚೆಕ್ ಅನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಚೆಕ್ ನಲ್ಲಿ ಏನಾದರೂ ನಮೂದು ಆಗಿತ್ತ ಎಂದರೆ ಸಾಕ್ಷಿಯು ಹೌದು ಅವರೆ ದಿನಾಂಕ, ಮೊತ್ತವನ್ನು ನಮೂದಿಸಿ ಸಹಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಚೆಕ್ ನಲ್ಲಿ ಬರೆದಿರುವ ಅಕ್ಷರಕ್ಕೂ ಮತ್ತು ಆರೋಪಿಯ ಸಹಿಗೂ ಒಂದಕ್ಕೊಂದು ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನೀವು ಯಾವ ಮುಖಬೆಲೆಯ ನೋಟನ್ನು ಆರೋಪಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ 500 ಮುಖಬೆಲೆಯ ನೋಟು ಎಂದು ನುಡಿಯುತ್ತಾರೆ. ಚೆಕ್ ನಲ್ಲಿ ಬರೆದಿರುವ ವಿಷಯದ ಬಗ್ಗೆ ಹಾಗೂ ಹಣದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಆರೋಪಿಯು ನೀಡಿರುವ ಮರು ಉತ್ತರದ ಬಗ್ಗೆ ಮಾಹಿತಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಆರೋಪಿಯು ನಾನು

ಸರ್ಕಾರಿ ನೌಕರನಾಗಿರುವುದರಿಂದ ಯಾವುದೇ ಹಣ ಪಡೆದಿರುವುದಿಲ್ಲ ಹಾಗೂ ಕಾನೂನು ತಿಳುವಳಿಕೆಯಲ್ಲಿ ಇರುವ ವಿಚಾರಗಳು ಸುಳ್ಳು ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಮನೆಯನ್ನು ಕಟ್ಟಲು ಯಾವುದೇ ರೀತಿಯಿಂದ ನಿಮ್ಮ ಬಳಿ ಹಣ ಪಡೆದಿರುವುದಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಯು ತಮ್ಮ ನಾದಿನಿಯ ವಿವಾಹಕ್ಕಾಗಿ ಹಣ ಪಡೆದಿದ್ದರು ಎಂದು ನಿಮ್ಮ ದೂರನಲ್ಲಿ ಹೇಳಿದ್ದು ಅದು ಸುಳ್ಳು ಎಂದರೆ ಸಾಕ್ಷಿ ಸುಳ್ಳು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**